3)	ಕಛೇರಿ ವೆಚ್ಚ	-	21, 13,094.00
	ಔಷಧ ಹಾಗೂ ರಾಸಾಯನ	-	69, 67,448.00
	ಆಸ್ಪತ್ರೆ ಪರಿಕರಣಗಳು	-	4, 58,4 16.00
	ಹಾಸಿಗೆ ಹಾಗೂ ಹೊದಿಕೆಗಳು	-	1, 96, 507.00
	ಪತ್ಯೆ ಆಹಾರ	-	26, 48,006.00
	ಸಾಧನ ಸಲಕರಣೆ	-	17, 84, 773.00
	ವಿದ್ಯುತ್ ಹಾಗೂ ನೀರಿನ ವೆಚ್ಚ	-	33, 14, 507.00
	ವೈದ್ಯಕೀಯ ಮರುಪಾವತಿ	-	45, 165.00
	ಪ್ರವಾಸ ವೆಚ್ಚ	-	66, 28 1.00
	ಒಟ್ಟು ರೂ.	-	**1, 75, 96, 197.00**

4) ಕರ್ನಾಟಕ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಅಧೀನದ ಉದ್ದಿಮೆಗಳಿಂದ ಮೊದಲ ಪ್ರಶ್ಯಸ್ತ್ಯ ಮತ್ತು ಉತ್ಪಾದಕ ಕಂಪನಿಗಳಿಂದ ಮತ್ತು ಹಳೇ ದರದ ಗುತ್ತಿಗೆ ದಾರದಿಂದ ಖರೀದಿ ನಿಯಮಾವಳಿಗಳ ಪ್ರಕಾರ ಖರೀದಿಸಲಾಗುತ್ತದೆ.

ಬಳ್ಳಾರಿ ಜಿಲ್ಲೆಯಲ್ಲಿ ಮಿದುಳು ಜ್ವರ ನಿಯಂತ್ರಣ

383 (645) ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಬಳ್ಳಾರಿ ಜಿಲ್ಲೆಯಲ್ಲಿ 1997 ರಲ್ಲಿ ಮಿದುಳು ಜ್ವರದಿಂದ ಪೀಡಿತರಾದವರ ಸಂಖ್ಯೆ ಎಷ್ಟು? ಹಾಗೂ ಅದರಿಂದ ಪ್ರಾಣ ಕಳೆದುಕೊಂಡವರೆಷ್ಟು?

2) ಬಳ್ಳಾರಿ ಜಿಲ್ಲೆಯಲ್ಲಿ ಮಿದುಳು ರೋಗವನ್ನು ನಿಯಂತ್ರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1) ಬಳ್ಳಾರಿ ಜಿಲ್ಲೆಯಲ್ಲಿ 1997ರಲ್ಲಿ ಒಟ್ಟು 200 ಜನರು ಮೆದುಳು ಜ್ವರದ ಸಂಶಯಾಸ್ಪದದಿಂದ ಪೀಡಿತರಾಗಿದ್ದು ಅವರಲ್ಲಿ 40 ಜನರು ಮೃತ ಪಟ್ಟಿರುತ್ತಾರೆ.

2) ಬಳ್ಳಾರಿ ಜಿಲ್ಲೆಯಲ್ಲಿ ಮೆದುಳು ಜ್ವರ ರೋಗವನ್ನು ನಿಯಂತ್ರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಅ) ಈ ರೋಗ ತಗುಲಿದ ಹಳ್ಳಿಗಳಲ್ಲಿ ಸೊಳ್ಳೆ ನಿಯಂತ್ರಣದ ಸಲುವಾಗಿ ಡಿ. ಡಿ. ಟಿ. ಕೀಟನಾಶಕವನ್ನು ಸಿಂಪಡಿಸಲಾಗಿದೆ.

ಆ) ಪಟ್ಟಣ ಪ್ರದೇಶ ಮತ್ತು ಹಳ್ಳಿಗಳಲ್ಲಿ ತಾಂತ್ರಿಕ ಮೇಲಾಥಿಯಾನ್ ದ್ರಾವಣದ ಹೊಗೆಯನ್ನು ಫಾಗಿಂಗ್ ಯಂತ್ರಗಳಿಂದ ಬಿಟ್ಟು ಸೊಳ್ಳೆಗಳ ನಿಯಂತ್ರಣ ಕೈಗೊಳ್ಳಲಾಗಿದೆ.

ಇ) ರೋಗ ತಗುಲಿದ ಪ್ರಕರಣಗಳಿಗೆ ಕೂಡಲೇ ಸೂಕ್ತ ಚಿಕಿತ್ಸೆಗಾಗಿ ಬಳ್ಳಾರಿ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಹಾಗೂ ಔಷಧಿ ಮತ್ತು ಸಾಮಾಗ್ರಿಗಳ ಸರಬರಾಜು ಸಾಕಷ್ಟು ಪ್ರಮಾಣದಲ್ಲಿ ಮಾಡಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿ ಕಂಡುಬಂದ ಪ್ರಕರಣಗಳನ್ನು ಸೂಕ್ತ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆ ಬಳ್ಳಾರಿಗೆ ವರ್ಗಾಯಿಸಲು ವ್ಯವಸ್ಥೆ ಮಾಡಲಾಗಿದೆ.

ಈ) ಮುಂಜಾಗ್ರತಾ ಕ್ರಮವಾಗಿ ಹಂದಿಗಳನ್ನು ಮನುಷ್ಯರ ಸಂಪರ್ಕದಿಂದ 3 ಕಿ.ಮೀ ದೂರಕ್ಕೆ ಸ್ಥಳಾಂತರಿಸಲಾಗಿದೆ.

ಉ) ನಗರ ಸಭೆಯ ಮೂಲಕ ಸೊಳ್ಳೆ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕೀಟನಾಶಕಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಮಾಡಲಾಗಿದೆ.

ಊ) ಬಳ್ಳಾರಿ ನಗರದ ವಿಜಯನಗರ ವೈದ್ಯಕೀಯ ಸಂಸ್ಥೆಯಲ್ಲಿ ಮೆದುಳು ಜ್ವರ ಪೀಡಿತರ ಚಿಕಿತ್ಸೆಗಾಗಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ.

ಋ) ಸಾರ್ವಜನಿಕರಿಗೆ ಈ ರೋಗದ ಬಗ್ಗೆ ಜನ ಜಾಗೃತಿ ಮೂಡಿಸಲು ವ್ಯಾಪಕವಾದ ಆರೋಗ್ಯ ಶಿಕ್ಷಣವನ್ನು ನೀಡಲಾಗಿದೆ.

ಕೊಡಗಿನಲ್ಲಿ ವೈದ್ಯರ ಕೊರತೆ

334 (705) ಶ್ರೀ ಎಂ.ಪಿ. ಅಪ್ಪಚ್ಚು ರಂಜನ್, (ಸೋಮವಾರ ಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಕೊಡಗಿನಲ್ಲಿ ಡಾಕ್ಟರ್‌ಗಳ ಕೊರತೆ ಎಷ್ಟು ಇದೆ? (ತಾಲ್ಲೂಕುವಾರು ವಿವರ ನೀಡುವುದು)

2) ಖಾಲಿ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ಡಾ: ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1) 104 ವೈದ್ಯರ ಹುದ್ದೆಗಳ ಪೈಕಿ 54 ಹುದ್ದೆಗಳು ಖಾಲಿ ಇವೆ. ತಾಲ್ಲೂಕುವಾರು ವಿವರಣಾ ಪಟ್ಟಿ ಲಗತ್ತಿಸಿದೆ.

2) ಏಪ್ರಿಲ್ ಮತ್ತು ಮೇ ತಿಂಗಳ ಸಾಮಾನ್ಯ ವರ್ಗಾವಣೆಯಲ್ಲಿ ಹಾಗೂ ಸ್ನಾತಕೋತ್ತರ ವ್ಯಾಸಂಗ ಪೂರೈಸಿ ನೇಮಕಾತಿಗಾಗಿ ಬರುವ ವೈದ್ಯರಿಂದ ತಾಲ್ಲೂಕು ಮಟ್ಟದ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಹಾಗೂ ಗ್ರಾಮಾಂತರ ಆಸ್ಪತ್ರೆಗಳಲ್ಲಿ ಗುತ್ತಿಗೆ ವೈದ್ಯರ ನೇಮಕಾತಿಯಿಂದ ಖಾಲಿ ಹುದ್ದೆಗಳನ್ನು ತುಂಬಲಾಗುವುದು.